**<u>ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಪ್ರತಾಪ್ ಸಿಂಹ ನಾಯಕ್ .ಕೆ ಇವರು ನಿಯಮ 72 ರಡಿ ಪ್ರಸ್ತಾಪಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ</u>**

ರಾಜ್ಯದಲ್ಲಿ ಮಾಸಿಕ ಪಿಂಚಣಿಗಾಗಿ 60 ವರ್ಷ ಮೇಲ್ಪಟ್ಟವರು ಸಂಧ್ಯಾ ಸುರಕ್ಷಾ ಯೋಜನೆಯಡಿ ಅರ್ಜಿ ಸಲ್ಲಿಸುವಾಗ ಆಧಾರ್ ಸಂಖ್ಯೆಯನ್ನು ಜೋಡಣೆ ಮಾಡುವುದನ್ನು ಹೊಸದಾಗಿ ಕಡ್ಡಾಯ ಮಾಡಲಾಗಿದೆ. ಈ ರೀತಿ ಆಧಾರ್ ಸಂಖ್ಯೆಯನ್ನು ಜೋಡಣೆ ಮಾಡುವುದನ್ನು ಹೊಸದಾಗಿ ಕಡ್ಡಾಯ ಮಾಡಿರುವುದರಿಂದ, ಹೊಸ ವ್ಯವಸ್ಥೆಯಲ್ಲಿ 32 ಸಾವಿರ ರೂ. ಗಿಂತ ಹೆಚ್ಚಿನ ಆದಾಯ ಹೊಂದಿರುವವರ ಅರ್ಜಿಗಳು ತಿರಸ್ಕೃತಗೊಳ್ಳುತ್ತಿವೆ.

ಸದರಿ ನಿಯಮವು ಅವೈಜ್ಞಾನಿಕವಾಗಿದ್ದು ಸಂಧ್ಯಾಕಾಲದಲ್ಲಿ ಪಿಂಚಣಿಯ ಆಸರೆ ಬಯಸುವ ವೃದ್ಧರಿಗೆ ಮಾರಕವಾಗಿರುವ ಗಂಭೀರ ಸಮಸ್ಯೆ ಕುರಿತು ಮಾನ್ಯ ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಸಚಿವರ ಗಮನವನ್ನು ಸೆಳೆಯಲು ಬಯಸುತ್ತೇನೆ.

**<u>ಉತ್ತರ</u>**

ಕೇಂದ್ರ ಸರ್ಕಾರವು The Aadhaar (Targeted Delivery of Financial & Other Subsides, Benefit and Services) Act, 2016ನ್ನು ಜಾರಿಗೆ ತಂದಿರುವ ಹಿನ್ನಲೆಯಲ್ಲಿ ದಿನಾಂಕ:23.11.2016 ರ ಸರ್ಕಾರಿ ಆದೇಶದಂತೆ ಸರ್ಕಾರದಿಂದ ಯಾವುದೇ ಸೌಲಭ್ಯ ಪಡೆಯುವಲ್ಲಿ ಆಧಾರ್ ಸಂಖ್ಯೆಯನ್ನು ಹಾಗೂ ನೇರ ಹಣ ಸಂದಾಯ ಯೋಜನೆ ಜಾರಿಗೊಳಿಸುವ ನಿಟ್ಟಿನಲ್ಲಿ ಬ್ಯಾಂಕ್ ಖಾತೆ ವಿವರ ಒದಗಿಸುವುದನ್ನು ಕಡ್ಡಾಯಗೊಳಿಸಲಾಗಿದೆ.

ಸಾಮಾಜಿಕ ಭದ್ರತಾ ಯೋಜನೆಗಳಡಿ ಸೌಲಭ್ಯ ಪಡೆಯುತಿರುವ ಎಲ್ಲಾ ಫಲಾನುಭವಿಗಳಿಗೂ ಹಾಗೂ ಹೊಸದಾಗಿ ಸೌಲಭ್ಯ ಕೋರಿ ಬರುವ ಅರ್ಜಿದಾರರಿಗೂ ಸಹ ಆಧಾರ್ ಸಂಖ್ಯೆಯನ್ನು ಕಡ್ಡಾಯಗೊಳಿಸಿ ಹಾಗೂ ಸದರಿ ಯೋಜನೆಗಳಡಿ ಸರ್ಕಾರದಿಂದ ನೀಡಲಾಗುತ್ತಿರುವ ಸವಲತ್ತುಗಳನ್ನು ನೇರ ಹಣ ಸಂದಾಯ ಯೋಜನೆಯಡಿ ತರಲು ನಿರ್ಧರಿಸಲಾಗಿರುವಂತೆ ಈಗಾಗಲೇ ವಿವಿಧ ಸಾಮಾಜಿಕ ಭದ್ರತಾ ಪಿಂಚಣಿ ಯೋಜನೆಗಳಡಿ ಸೌಲಭ್ಯ ಪಡೆಯುತಿರುವ ಎಲ್ಲಾ ಫಲಾನುಭವಿಗಳು ಬ್ಯಾಂಕ್/ಅಂಚೆ ಖಾತೆ ವಿವರಗಳನ್ನು ನೀಡುವುದನ್ನು ಕಡ್ಡಾಯಗೊಳಿಸಿ ದಿನಾಂಕ:23-01-20217 ರಂದು ಅಧಿಸೂಚನೆ ಹೊರಡಿಸಲಾಗಿದೆ.

ಪ್ರಸುತ ಸಾಮಾಜಿಕ ಭದ್ರತೆ ಯೋಜನೆಯಡಿ ಪಿಂಚಣಿ ಪಡೆಯುತಿರುವ ಶೇ 100 ರಷ್ಟು ಎಲ್ಲಾ ಫಲಾನುಭವಿಗಳಿಗೂ ಆಧಾರ್ ಸಂಖ್ಯೆ ಜೋಡಣೆಯಾಗಿದ್ದು, ದಿನಾಂಕ:30.12.2023 ರ ಸರ್ಕಾರಿ ಆದೇಶದಂತೆ ಡಿಸೆಂಬರ್ -2023 ರ ಮಾಹೆಯಿಂದ ಎಲ್ಲಾ ಫಲಾನುಭವಿಗಳಿಗೆ ಆಧಾರ್ ಆಧಾರಿತ ವ್ಯವಸ್ಥೆಯಡಿ (AEPS) ಕೇಂದ್ರಿಕೃತವಾಗಿ ಪಿಂಚಣಿಯನ್ನು ವಿತರಿಸಲಾಗುತ್ತಿದೆ.

ಸಾಮಾಜಿಕ ಭದ್ರತಾ ಯೋಜನೆಯಡಿ ಕೆಳಕಂಡ ಮಾನದಂಡಗಳನ್ವಯ ಫಲಾನುಭವಿಗಳು ಸಂಧ್ಯಾ ಸುರಕ್ಷಾ ಯೋಜನೆಯಡಿ ಪಿಂಚಣಿಯನ್ನು ಪಡೆಯಲು ಅರ್ಹರಿರುತ್ತಾರೆ.

- ಸರ್ಕಾರದ ಆದೇಶ ಸಂಖ್ಯೆ ಕಂಇ 85 ಡಿ ಎಸ್ ಪಿ 2011 , ದಿನಾಂಕ: 21.06.2011 ರಲ್ಲಿ ವಾರ್ಷಿಕ ಆದಾಯ ಮಿತಿಯನ್ನು ಗ್ರಾಮೀಣ ಪ್ರದೇಶಗಳಲ್ಲಿ ರೂ 12000 ಮತ್ತು ನಗರ ಪ್ರದೇಶಗಳಲ್ಲಿ ರೂ 17000 ಗಳಿಗೆ ನಿಗಧಿಪಡಿಸಿದ್ದು , ಸದರಿ ಆದೇಶವನ್ನು ಪರಿಷ್ಕರಿಸಿ DSSP/MISC-05/2020 ದಿನಾಂಕ:10.02.2021 ರಲ್ಲಿ ಸಾಮಾಜಿಕ ಭದ್ರತಾ ಯೋಜನೆಯಡಿ ಪಿಂಚಣಿ ಮಂಜೂರಾತಿ ಪಡೆಯಲು ಕುಟುಂಬದ ವಾರ್ಷಿಕ ಆದಾಯ ರೂ 32000/- ಗಳಿಗೆ ಮಿತಿಗೊಳಿಸಲಾಗಿದೆ.
- ಸದರಿ ಯೋಜನೆಯಡಿ ಫಲಾನುಭವಿಗಳನ್ನು ಈ ಕೆಳಕಂಡ ವರ್ಗಗಳಿಂದ ಆಯ್ಕೆ ಮಾಡಲಾಗುತ್ತದೆ:

  1. ಸಣ್ಣ ರೈತರು
  2. ಅತೀ ಸಣ್ಣ ರೈತರು
  3. ಕೃಷಿ ಕಾರ್ಮಿಕರು
  4. ನೇಕಾರರು
  5. ಮೀನುಗಾರರು

- ಫಲಾನುಭವಿಗಳ ಪತ್ನಿ ಅಥವಾ ಪತಿಯ ಸಂಯೋಜಿತ ಠೇವಣಿಗಳ ಒಟ್ಟು ಮೌಲ್ಯವು ರೂ 10000/- ಗಳಿಗಿಂತ ಹೆಚ್ಚಾಗಿರಬಾರದು.

ಕರ್ನಾಟಕ ಆಡಳಿತ ಸುಧಾರಣಾ ಆಯೋಗವು ಸಾಮಾಜಿಕ ಭದ್ರತಾ ಯೋಜನೆಯಡಿ ಆದಾಯ ಮಿತಿಗೆ ಒಳಪಟ್ಟು ಅರ್ಜಿಯನ್ನು ಸ್ವೀಕರಿಸಲು ತಂತ್ರಾಂಶ ಅಭಿವೃದ್ಧಿ ಪಡಿಸಲು ಶಿಫಾರಸ್ಸು ಮಾಡಲಾಗಿರುತ್ತದೆ.

ಅದರಂತೆ, ಪ್ರಸ್ತುತನಾಡ ಕಛೇರಿ ತಂತ್ರಾಂಶ-5 ರಲ್ಲಿ ಕುಟುಂಬ ದತ್ತಾಂಶದಲ್ಲಿನ ಮಾಹಿತಿಯೊಂದಿಗೆ ಅನುಕಲನೆ ಮುಖಾಂತರ ಆಧಾರ್ ಸಂಖ್ಯೆ ಆಧರಿಸಿ ಆದಾಯ ಪ್ರಮಾಣ ಪತ್ರದಲ್ಲಿನ ಮಾಹಿತಿಯನು ಪಡೆಯಲಾಗುತ್ತಿದ್ದು, ಪಿಂಚಣಿ ನಿಯಮಗಳಿಗೆ ಅನುಗುಣವಾಗಿ ಕುಟುಂಬದ ವಾರ್ಷಿಕ ಆದಾಯ ರೂ.32000/-ಗೆಳಿಗಿಂತ ಕಡಿಮೆಯಿರುವ ಫಲಾನುಭವಿಗಳು ಪಿಂಚಣಿ ಕೋರಿ ಅರ್ಜಿ ಸಲ್ಲಿಸಬಹುದಾಗಿದೆ.

ಮುಂದುವರೆದು, ಸದರಿ ಯೋಜನೆಗೆ ಸಂಬಂಧಿಸಿದ ಮೇಲಿನ ನಿಯಮಗಳು ಕಾನೂನು ಬದ್ಧವಾಗಿ ರೂಪಿತವಾಗಿರುವುದರಿಂದ ಮತ್ತು ಸಾಮಾಜಿಕ ಭದ್ರತಾ ಮಾನದಂಡಗಳಿಗೆ ಅನುಗುಣವಾಗಿ ಅರ್ಜಿಯನ್ನು ಸ್ವೀಕರಿಸುತ್ತಿರುವುದರಿಂದ ಯಾವುದೇ ರೀತಿಯ ಸಮಸ್ಯೆಗಳಿಗೆ ಅನುವಾಗದಂತೆ ಸಂಧ್ಯಾ ಸುರಕ್ಷಾ ಯೋಜನೆಯಡಿ ನಿಗದಿತ ಆದಾಯ ಮಿತಿಗೊಳಪಟ್ಟು ಪಿಂಚಣಿ ಅರ್ಜಿ ಸ್ವೀಕರಿಸಿ ಅರ್ಹ ಫಲಾನುಭವಿಗಳಿಗೆ ಮಂಜೂರಾತಿ ನೀಡಲಾಗುತ್ತಿದೆ.

**ಕಡತ ಸಂಖ್ಯೆ:ಆರ್‌ಡಿ 36 ಕೆಎಟಿ ಎಸ್‌ಎಸ್‌ಪಿ 2024**

(ಕೃಷ್ಣ ಬೈರೇಗೌಡ)
ಕಂದಾಯ ಸಚಿವರು